**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ವನಜಾಕ್ಷಮ @ ವನಜಾಕ್ಷಿ | ಪ್ರಾಸಾ -3 |
| ಗಂಡನ ಹೆಸರು | : ಷಡಾಕ್ಷರಿ | ಚಾಸಾ-2 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ16.01.2025 |
| ವಾಸಸ್ಥಳ | : ಕಡೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ KSRTC ಬಸ್ ನ ಚಾಲಕ. ಚಾಸಾ-1, 3 ರಿಂದ 14 ರವರ ಪರಿಚಯ ನನಗಿಲ್ಲ.

ದಿ.07.07.2023 ರಂದು ನಾನು ಕಡೂರಿನಿಂದ ಮಂಗಳೂರಿಗೆ KSRTC ಬಸ್ ನಲ್ಲಿ ಹೋಗುತ್ತಿದ್ದಾಗ ಮ.3.15 ರ ಸಮಯಕ್ಕೆ ಚಾರ್ಮುಡಿ ಘಾಟಿಯಲ್ಲಿ ನಾನು ಇದ್ದ ಬಸ್ ಹಾಗೂ ಎದುರಿನಿಂದ ಬಂದ KSRTC ಬಸ್ ನಡುವೆ ಅಪಘಾತವಾಯಿತು. ಅಪಘಾತದಿಂದ ನನ್ನ ತಲೆಯ ಮುಂಭಾಗಕ್ಕೆ ಪೆಟ್ಟಾಗಿ ಬಲಗೈ ಮುರಿದುಹೋಗಿತ್ತು. ನಾನು ಇದ್ದ ಬಸ್ಸಿನ ಚಾಲಕರ ತಪ್ಪಿನಿಂದಲೇ ಅಪಘಾವಾಗಿರಬಹದು ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಇದ್ದ ಬಸ್ ನ ಚಾಲಕರು ಯಾರು ಎಂದು ನಾನು ಗಮನಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ಇದ್ದ ಬಸ್ಸನ್ನು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಚಲಾಯಿಸುತ್ತಿದ್ದರು ಎಂದರೆ ನಾನು ನೋಡಿಲ್ಲ. ಸದರಿ ಬಸ್ ನ ನೋ.ಸಂ.KA-21-F-0215 KSRTC ಎಂದರೆ ಸಾಕ್ಷಿಯು ತನಗೆ ರಕ್ತ ಸ್ರಾವವಾಗುತ್ತಿದ್ದ ಕಾರಣ ಅದನ್ನು ಗಮನಿಸಲಿಲ್ಲ ಎಂದು ನುಡಿಯುತ್ತಾರೆ. ದಿ.07.07.2023 ರಂದು ಮ.3.15 ರ ಸಮಯಕ್ಕೆ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯು ನೋ.ಸಂ.KA-21-F-0215 KSRTC ಬಸ್ಸನ್ನು ಚಾರ್ಮುಡಿ ಘಾಟ್ ಅಣ್ಣಪ್ಪ ಸ್ವಾಮಿ ದೇವಸ್ಥಾನದ ಸ್ವಲ್ಪ ಮುಂದೆ ಅತೀವೇಗ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿ ನೋ.ಸಂ.KA-17-F-1901 ಬಸ್ಸಗೆ ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿದೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ ವಕೀಲರಿಂದಃ**

ಅಪಘಾತವಾದ ನಂತರ ನನಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸರಿ. ಆ ಕಾರಣ ನನಗೆ ಏನಾಯಿತು ಎಂದು ಗೊತ್ತಗಲಿಲ್ಲ ಎಂದರೆ ಸರಿ. ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ.

ಕಡೂರಿನಿಂದ ಮಂಗಳೂರಿಗೆ ಹೋಗುವಾಗ ಚಾರ್ಮುಡಿ ಘಾಟಿಯ ಎಡಭಾಗಕ್ಕೆ ಆಳವಾದ ಪ್ರದೇಶ ಇದೆ ಎಂದರೆ ಸರಿ. ಮಂಗಳೂರಿನಿಂದ ಕೊಟ್ಟಿಗೆಹಾರದ ಕಡೆ ಬರುತ್ತಿದ್ದ ಬಸ್ ನ ಎಡಭಾಗಕ್ಕೆ ಜಾಗ ಇತ್ತು ಎಂದರೆ ಸರಿ. ಈಗ ನೋಡುತ್ತಿರುವ ಪೋಟೋಗಳ ಎಡಭಾಗಕ್ಕೆ ಇರುವ ವಾಹನ ನಾನು ಇದ್ದ ಬಸ್ಸಾಗಿದ್ದು, ಬಲಭಾಗದಲ್ಲಿರುವ ವಾಹನ ಎದುರಿನಿಂದ KSRTC ಬಸ್ ಎಂದರೆ ಸರಿ. ಸದರಿ ಪೋಟೋಗಳನ್ನು ನಿಡಿ-1 ರಿಂದ 3 ಎಂದು ಗುರುತಿಸಲಾಯಿತು. ನಾನು ಇದ್ದ ಬಸ್ 1 ಅಡಿಯಷ್ಟು ಎಡಕ್ಕೆ ಚಲಿಸಿದ್ದರೆ ಬಸ್ ಪ್ರಪಾತಕ್ಕೆ ಬೀಳುತ್ತಿತ್ತು ಎಂದರೆ ಸರಿ.

ಮಂಗಳೂರಿನಿಂದ ಬಂದ ಬಸ್ಸನ ಎಡಭಾಗಕ್ಕೆ ಮತ್ತೊಂದು ವಾಹನ ಹೋಗುವಷ್ಟು ಜಾಗ ಇತ್ತು ಎಂದರೆ ಸರಿ. ಸದರಿ ಬಸ್ ನವರು ಎಡಭಾಗಕ್ಕೆ ಚಲಿಸಿದ್ದರೆ ಅಪಘಾತವಾಗುತ್ತಿರಲಿಲ್ಲ ಎಂದರೆ ಸರಿ. ಆ ಬಸ್ ರಸ್ತೆಯ ಬಲಭಾಗಕ್ಕೆ ಬಂದ ಕಾರಣ ಅಪಘಾತವಾಯಿತು ಎಂದು ನುಡಿಯುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.